

ಎಡದಿಂದ ಬಲಕ್ಕೆ:

1. ಅವಾಂತರ ಅಲ್ಲಿ ನಿರಂತರ ಬಿಡಿ (4)
3. ನರಿಯ ಬೆನ್ನುಹತ್ತಿದವನ ಕೈಯಲ್ಲೊಂದು ತಂತೀವಾದ್ಯ (3)
4. ಹೊಸ ಪರಿಯ ಸಹಾಯಕ್ಕಾಗಿ ಅರಸನ ಪತ್ರ (3)
6. ಸಸ್ಯವಲ್ಲದ ಜೀವಿಗಳ ಇಡೀ ಗುಂಪು ಗೊತ್ತೇ? (3)
7. ಹೊಸ ರಕ್ತ ಹುಡುಕ ಹೋಗಿ ಕೈಯೆಲ್ಲ ಖಾಲಿ (4)
9. ಮಾರ್ದನಿ ಕೇಳಿದ್ದು ಆ ದಿನದ ನಂತರದ ದಿನ (4)
12. ಬನದ ಮೇಲೇ ಸಾಗಿಹೋಗಿದೆ 'ಆಕಾಶ ಹಾದಿ' (4)
14. ವರ್ತಕನ ಕೈ ತುಂಬ ಕಲಾಯದ ಲೋಹ (3)
15. ಅಲ್ಲಿ ಕಾಣಿಸಿದವ ಒಬ್ಬ ವ್ಯಾಪಾರಿ (3)
16. ಅಲ್ಲಿ ಸೇರುವವರೆಲ್ಲ ನೋಡಬಹುದಾದ ಭಾರೀ ಜಲಾವಾರ (4)

ಮೇಲಿಂದ ಕೆಳಕ್ಕೆ:

1. ಅವರಿವರ ಗರ್ವ ಅಡಗಿಸಿದ ಶತ್ರು ಬಣ (4)
2. ತರಕಾರಿ ವಿಧಗಳು ಬಗೆ ಬಗೆ (4)
3. ಕಾರಾಮಣಿ ಮಾರುವಲ್ಲೇ ಎಲ್ಲ ದವಸ ಲಭ್ಯ (3)
5. ಹೊಸ ಮನೆ ನೋಡಲು ಬಂದದ್ದು ಭಾರೀ ಗುಂಪು (3)
6. ಪ್ರಯಾಣ ಮಾಡುವಾಗಲೇ 'ಉಸಿರಾಟದ ವ್ಯಾಯಾಮ' ಕೂಡ (4)
8. ಹಾಲುಣಿಸಿ ಮರಿಬೆಳೆಸುವ ಪ್ರಾಣಿ ಸಮುದಾಯ (4)
10. ರಾದ್ಧಾಂತಕ್ಕೇ ದಾರಿ ಮಾಡಿತು ಅಳು (3)
11. ಕಾವ್ಯಗಳಲ್ಲಿ ಇದ್ದೇ ಇದೆ-'ಒಂಬತ್ತು ರುಚಿ' (4)
12. ಬಣ್ಣದವರೇ ಇದ್ದಾರೋ ಎಂಬಂಥ ಹೆಸರಿನ ಊರು (4)
13. ಈ ಭಾರೀ ಕುಲುಮೆಗೆ ಅವನೇ ಒಡೆಯ (3)

## ಪದಬಂಧ: 2-9-2010ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅನುಕಂಪ; 3. ಗರತಿ; 7. ಹಾನಿಕರ; 8. ವಿಠೋಬಾ; 9. ಕಲೆ; 12. ರಮಾ; 14. ಚಾವಣಿ; 15. ಸರಹದ್ದು; 17. ಮುಸುಕು; 18. ನೀರಹನಿ.

ಮೇಲಿಂದ ಕೆಳಕ್ಕೆ:

1. ಅತಿ; 2. ಕಂಬನಿ; 4. ರಸಬಾಳೆ; 5. ಪೂರಕ; 6. ಸವಿವರ; 10. ಲೆಕ್ಕಣಿಕೆ; 11. ವಿಚಾರಿಸು; 13. ಮಾಸಲು; 16. ಹಜಾರ; 17. ಮುನಿ.

# ಪ್ರಕೃತಿ ಪರಿಚಯ



## 'ಅರಣ್ಯ' ಎಂದರೇನು?

ಬಹು ಜನ ವಿವರಿಸುವಂತೆ, ನಿಘಂಟುಗಳು ಕೂಡ ನಿರೂಪಿಸುವಂತೆ 'ವೃಕ್ಷಗಳು ದಟ್ಟವಾಗಿ ಬೆಳೆದು ನಿಂತಿರುವ ವಿಸ್ತಾರ ಪ್ರದೇಶವೇ ಅರಣ್ಯ.' ಆದರೆ ವಾಸ್ತವ ಏನೆಂದರೆ ಇಷ್ಟೇ ವಿವರಣೆ ಅರಣ್ಯದ ಅರ್ಥವನ್ನು ಪೂರ್ಣವಾಗಿ ತಿಳಿಸುವುದಿಲ್ಲ; ಅರಣ್ಯದ ನೈಜ ಚಿತ್ರವನ್ನು ಒದಗಿಸುವುದೂ ಇಲ್ಲ.

ಏಕೆಂದರೆ ಅರಣ್ಯ ಎಂಬುದು ವೃಕ್ಷಗಳ ವಿಶಾಲ ನಿಬಿಡ ಸಮೂಹ ಅಷ್ಟೇ ಏನಲ್ಲ. ಅಡವಿಗಳಲ್ಲಿ ವೃಕ್ಷಗಳ ಜೊತೆಗೆ ವೃಕ್ಷಗಳನ್ನು ಬಳಸಿ ಬೆಳೆದ ಬಳ್ಳಿಗಳು, ಮಹಾವೃಕ್ಷಗಳ ಕೊಂಬೆ ಕುಳಿಗಳಲ್ಲೇ ನೆಲೆ ಹಿಡಿದ ಅಪ್ಪು ಗಿಡಗಳು, ಕಾಂಡಗಳನ್ನಾವರಿಸಿದ ಶೈವಲಗಳು– ಶಿಲೀಂಧ್ರಗಳು, ವೃಕ್ಷಗಳ ಬುಡದಲ್ಲಿ ನೆಲದ ಎಲ್ಲೆಡೆ ದಟ್ಟೈಸಿದ ಗಿಡಗಳು ಪೊದೆಗಳು. ಹಾಗೆಲ್ಲ ಕಾನನಗಳಲ್ಲಿ ಅಪಾರ ಎನಿಸುವಷ್ಟು ಸಸ್ಯ ವೈವಿಧ್ಯ.

ಹಾಗೆಂದು ಅರಣ್ಯ ಎಂದರೆ ಕೇವಲ ಸಸ್ಯ ಸದಸ್ಯರ ಸಾಮ್ರಾಜ್ಯ ಎಂದು ಭಾವಿಸುವಂತಿಲ್ಲ. ಸಸ್ಯಗಳ ಜೊತೆಗೆ ಅಡವಿಗಳು ಅಷ್ಟೇ ವೈವಿಧ್ಯದ ಪ್ರಾಣಿಗಳ ಬದುಕಿನ ಆವಾರ ಕೂಡ. ಧರೆಯಲ್ಲಿರುವ ಸಕಲ ನೆಲಪ್ರಾಣಿ ವಿಧಗಳು– ಎಂದರೆ ಕೀಟ, ಉರಗ, ಉಭಯವಾಸಿ, ಹಕ್ಕಿ, ಸ್ತನಿ ಇತ್ಯಾದಿ– ಯಾವುದೇ ಅರಣ್ಯದಲ್ಲಿ ನೆಲಸಿರುತ್ತವೆ.

ಆದ್ದರಿಂದಲೇ ಅರಣ್ಯ ಎಂಬುದು ಭೂ ನೆಲದ ಅತಿ ನಿಬಿಡ ಜೀವಾವರಣ. ಅದು ಗರಿಷ್ಠ ವೈವಿಧ್ಯದ, ಗರಿಷ್ಠ ಸಂಖ್ಯೆಯ ಸಸ್ಯಗಳ-ಪ್ರಾಣಿಗಳ ವಾಸಕ್ಷೇತ್ರ. ಅಡವಿಗಳಲ್ಲಿರುವಷ್ಟು 'ಜೀವಿ ಸರಪಳಿ'ಗಳು ಬೇರೆ ಯಾವ ನೆಲ ಜೀವಾವಾರದಲ್ಲೂ ಇಲ್ಲ. ಅದರಲ್ಲೂ 'ಮಳೆ ಕಾಡು'ಗಳಂತೂ ಧರೆಯ ಇಡೀ ಸಸ್ಯವರ್ಗದ ಮತ್ತು ನೆಲವಾಸಿ ಪ್ರಾಣಿವರ್ಗದ ಶೇಕಡ ತೊಂಬತ್ತರಷ್ಟು ಪ್ರಭೇದಗಳ ಆಶ್ರಯತಾಣ!

ಇಂಥ ಮಹತ್ವದಿಂದಾಗಿಯೇ ಭೂ ನೆಲದ ಎಲ್ಲ ಹವಾ ವಲಯಗಳಲ್ಲೂ ಅರಣ್ಯಗಳಿವೆ. ಅಡವಿಗಳು ಉಷ್ಣವಲಯದಲ್ಲಿವೆ, ಸಮಶೀತೋಷ್ಣವಲಯದಲ್ಲಿವೆ, ಶೀತವಲಯದಲ್ಲಿವೆ, ಪರ್ವತ ಪ್ರದೇಶಗಳಲ್ಲಿವೆ, ಕಡಲಿನ ಅಂಚುಗಳಲ್ಲೂ ಇವೆ. ಪ್ರತಿ ಪ್ರದೇಶದ ಕಾನನದಲ್ಲೂ ಅಲ್ಲಿನದೇ ವಿಶಿಷ್ಟ ಸಸ್ಯವರ್ಗ ಮತ್ತು ಪ್ರಾಣಿವರ್ಗ ನೆಲೆಗೊಂಡಿದೆ.

ವಿಪರ್ಯಾಸ ಏನೆಂದರೆ ಮನುಷ್ಯರಿಂದ ಗರಿಷ್ಠ ಪ್ರಮಾಣದಲ್ಲಿ ವಿನಾಶಗೊಳ್ಳುತ್ತಿರುವ ಜೀವಾವಾರ ಕೂಡ ಅರಣ್ಯವೇ ಆಗಿದೆ.

■ ಎನ್. ವಾಸುದೇವ್